ನಿರ್ದೇಶಕನಾಗಿ ಗುರ್ತಿಸಿದ್ದು ‘ಚೌಕಾಬಾರಾ’ ಕಿರುಚಿತ್ರದ ನಂತರ. ಹಲವು ಪ್ರಶಸ್ತಿಗಳನ್ನು ಆ ಕಿರುಚಿತ್ರ ತಂದುಕೊಟ್ಟಿತು. ನಂತರ ‘ಚೂರಿಕಟ್ಟೆ’ ಎಂಬ ಸಿನಿಮಾವನ್ನು ನಿರ್ದೇಶಿಸಿದರು.

ನಿರ್ದೇಶನದಲ್ಲಿ ಪೂರ್ತಿ ಕಳೆದುಹೋಗಿದ್ದ ಅವರನ್ನು ಮತ್ತೆ ನಟನೆಯ ಹಳೆಯ ಟ್ರ್ಯಾಕಿಗೆ ಕರೆತಂದಿದ್ದು ಮಂಸೋರೆ. ‘ಆ್ಯಕ್ಟ್ 1978 ಸಿನಿಮಾದಲ್ಲಿ ನನಗೊಂದು ಪಾತ್ರ ಕೊಟ್ಟರು. ಒಳ್ಳೆಯ ಪಾತ್ರ ಅಂತ ನಟಿಸಿದ್ದೆನಷ್ಟೆ. ಅದರಾಚೆಗೆ ಏನೂ ನಿರೀಕ್ಷೆ ಇರಲಿಲ್ಲ. ಅದರಿಂದ ನನ್ನ ನಟನೆಯ ವೃತ್ತಿಯೇ ಹೊಸ ತಿರುವು ಪಡೆದುಕೊಳ್ಳುತ್ತದೆ ಎಂದು ಊಹಿಸಿರಲಿಲ್ಲ. ಆ ಸಿನಿಮಾ ಬಿಡುಗಡೆಯಾಗಿದ್ದೇ ಜನರು ನನ್ನ ಪಾತ್ರವನ್ನು ಗುರ್ತಿಸಿದರು. ನನಗೆ ಸಾಕಷ್ಟು ನಟನೆಯ ಅವಕಾಶಗಳು ಬರತೊಡಗಿದವು’ ಎನ್ನುವ ರಾಘು ಅವರ ಕೈಯಲ್ಲೀಗ ಐದಾರು ಸಿನಿಮಾಗಳಿವೆ.

ಆ್ಯಂಥಾಲಜಿಯೊಂದರಲ್ಲಿ ಜಯತೀರ್ಥ ನಿರ್ದೇಶನದ ಕಥೆಯಲ್ಲಿ ರಾಘು ಒಂದು ಮುಖ್ಯಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ‘ರೂಮ್ ಬಾಯ್’ ಎಂಬ ಪ್ರಾಯೋಗಿಕ ಸಿನಿಮಾದಲ್ಲಿಯೂ ನಟಿಸಿದ್ದಾರೆ. ‘ಲವ್ ಯೂ ರಚ್ಚು’, ‘ಪೆಂಟಗನ್’, ಹರ್ಷ ನಿರ್ದೇಶನದ ‘ವೇದ’, ‘ಬೆಲ್ ಬಾಟಂ 2’ ಹೀಗೆ ಅವರು ನಟಿಸುತ್ತಿರುವ ಸಿನಿಮಾಗಳ ಪಟ್ಟಿ ಬೆಳೆಯುತ್ತಲೇ ಹೋಗುತ್ತದೆ.

‘ನಾನು ವರ್ಷಕ್ಕೆ ಒಂದು ಸಿನಿಮಾ ನಿರ್ದೇಶಿಸಬೇಕು ಎಂದುಕೊಂಡಿದ್ದೇನೆ. ಅದಕ್ಕೆ ಹೆಚ್ಚೆಂದರೆ 150 ದಿನಗಳನ್ನು ವಿನಿಯೋಗಿಸಬೇಕಾಗಬಹುದು. ಉಳಿದ ದಿನಗಳಲ್ಲಿ ನಟನೆಯಲ್ಲಿ ತೊಡಗಿಕೊಳ್ಳುತ್ತೇನೆ. ನಟನೆ ಮತ್ತು ನಿರ್ದೇಶನ ಎರಡನ್ನೂ ನಿಭಾಯಿಸಿಕೊಂಡು ಹೋಗಲು ನಿರ್ಧರಿಸಿದ್ದೇನೆ’ ಎನ್ನುವ ರಾಘು ಅವರಿಗೆ ನೆಗೆಟಿವ್ ಶೇಡ್ ಪಾತ್ರಗಳು ಎಂದರೆ ತುಂಬಾ ಇಷ್ಟವಂತೆ.

‘ನನಗೆ ಮೊದಲಿನಿಂದಲೂ ಆ್ಯಕ್ಷನ್ ಸನ್ನಿವೇಶಗಳು ಎಂದರೆ ಇಷ್ಟ. ಎದುರಿನಿಂದ ಬರುತ್ತಿದ್ದ ಕಾರಿಗೆ ಎಗರಿ ಗಾಜು ಒಡೆಯಬೇಕು ಎಂದು ಸ್ನೇಹಿತರಲ್ಲಿ ಹೇಳಿಕೊಳ್ಳುತ್ತಿದ್ದೆ. ಅವರೆಲ್ಲರೂ ಗ್ಲಾಸ್ ಬ್ರೇಕರ್ ಎಂದು ಹಾಸ್ಯ ಮಾಡುತ್ತಿದ್ದರು. ಈಗಲೂ ನನಗೆ ರಿಸ್ಕ್ ಇರುವ ಆ್ಯಕ್ಷನ್ ಸನ್ನಿವೇಶಗಳಲ್ಲಿ ನಟಿಸುವುದು ಇಷ್ಟ’ ಎನ್ನುತ್ತಾರೆ.

‘ಪೆಂಟಗನ್’ ಎಂಬ ಆ್ಯಂಥಾಲಜಿಯಲ್ಲಿ ಒಂದು ಕಥೆಯನ್ನು ನಿರ್ದೇಶಿಸಿರುವ ಅವರು, ಈಗ ಮತ್ತೊಂದು ಸಿನಿಮಾ ನಿರ್ದೇಶನಕ್ಕೆ ಸಜ್ಜಾಗಿದ್ದಾರೆ. ಕ್ರೈಮ್ ಥ್ರಿಲ್ಲರ್ ಜಾನರ್‌ನ ಈ ಸಿನಿಮಾದಲ್ಲಿ ಕನ್ನಡದ ಜನಪ್ರಿಯ ನಟಿಯೊಬ್ಬರು ಮುಖ್ಯ ಪಾತ್ರದಲ್ಲಿ ನಟಿಸುವ ಸಾಧ್ಯತೆ ಇದೆ.

ಅಕ್ಟೋಬರ್ ಹೊತ್ತಿಗೆ ಚಿತ್ರೀಕರಣ ಪ್ರಾರಂಭಿಸುವ ಯೋಜನೆ ಹಾಕಿಕೊಂಡಿರುವ ರಾಘು, ಅವರು ನಟನೆ ಮತ್ತು ನಿರ್ದೇಶನ ಎರಡೂ ಕ್ಷೇತ್ರಗಳಲ್ಲಿ ತಮ್ಮ ಛಾಪು ಮೂಡಿಸುವ ಕನಸು ಹೊತ್ತಿದ್ದಾರೆ. ■



# ರಾಣಾ ಆದ ಶ್ರೇಯಸ್

ನಿರ್ಮಾಪಕ ಕೆ. ಮಂಜು ಅವರ ಮಗ ಶ್ರೇಯಸ್ ಕೆ. ಮಂಜು ನಾಯಕನಾಗಿ ರಂಗಪ್ರವೇಶ ಮಾಡಿದ್ದು ‘ಪಡ್ಡೆಹುಲಿ’ ಸಿನಿಮಾದ ಮೂಲಕ. ಬಿಡುಗಡೆಗೂ ಮುನ್ನ ಸಾಕಷ್ಟು ಸದ್ದು ಮಾಡಿದ್ದ ಆ ಸಿನಿಮಾ ಚಿತ್ರಮಂದಿರದಲ್ಲಿ ಮಾತ್ರ ಕಚ್ಚಿಕೊಂಡು ನಿಲ್ಲಲಿಲ್ಲ. ಪಡ್ಡೆಹುಲಿ ಗರ್ಜನೆಗೆ ಜನರು ತಿರುಗಿ ನೋಡಲಿಲ್ಲ. ಆದರೆ ನಿರ್ಮಾಪಕರ ಮಕ್ಕಳ ಮೊದಲ ಚಿತ್ರದ ಸೋಲು ಸೋಲೇ ಅಲ್ಲ ಬಿಡಿ.

ಈಗ ಶ್ರೇಯಸ್ ಅವರ ಮೂರನೇ ಸಿನಿಮಾ ಘೋಷಣೆಯಾಗಿದೆ. ಅದರ ಹೆಸರು ‘ರಾಣಾ’. ಈ ಹಿಂದೆ ಎ. ಹರ್ಷ ನಿರ್ದೇಶನದಲ್ಲಿ ಯಶ್ ಅಭಿನಯಿಸಲಿರುವ ಚಿತ್ರದ ಹೆಸರೂ ‘ರಾಣಾ’ ಎಂದು ಘೋಷಣೆಯಾಗಿತ್ತು. ಆದರೆ ನಂತರ ಆ ಚಿತ್ರ ಅಲ್ಲಿಗೇ ನಿಂತುಬಿಟ್ಟಿತು. ಈಗ ಆ ಶೀರ್ಷಿಕೆಯು ಶ್ರೇಯಸ್ ಅವರಿಗೆ ಸಿಕ್ಕಿದೆ.

ಗುಜ್ಜಾಲ್ ಟಾಕೀಸ್ ನಿರ್ಮಾಣ ಮಾಡುತ್ತಿರುವ ಈ ಚಿತ್ರದ ಮುಹೂರ್ತ ಬೆಂಗಳೂರಿನಲ್ಲಿ ನೆರವೇರಿದೆ. ನಂದಕಿಶೋರ್ ಆ್ಯಕ್ಷನ್, ಕಟ್ ಹೇಳುತ್ತಿರುವ ಈ ಚಿತ್ರಕ್ಕೆ ರೇಷ್ಮಾ ನಾಣಯ್ಯ ನಾಯಕಿ. ಚಂದನ್ ಶೆಟ್ಟಿ ಸಂಗೀತ ಸಂಯೋಜನೆ ಮಾಡಲಿದ್ದಾರೆ. ಹೆಸರೇ ಹೇಳುವಂತೆ ಕಮರ್ಷಿಯಲ್ ಚೌಕಟ್ಟಿನಲ್ಲಿ ಭರ್ಜರಿ ಆ್ಯಕ್ಷನ್ ಇರುವ ಈ ಸಿನಿಮಾ ತಮಗೆ ತಾರಾವರ್ಚಸ್ಸು ತಂದುಕೊಡುತ್ತದೆ ಎಂಬ ನಂಬಿಕೆಯಲ್ಲಿ ಶ್ರೇಯಸ್ ಇದ್ದಾರೆ. ■

# ಮತ್ತೆ ಒಂದಾದ ಅರ್ಜುನ್–ಧ್ರುವ ಜೋಡಿ



ಧ್ರುವ ಸರ್ಜಾ



ಎ.ಪಿ. ಅರ್ಜುನ್

ಧ್ರುವ ಸರ್ಜಾ ಮತ್ತು ರಾಧಿಕಾ ಪಂಡಿತ್ ಜೋಡಿಯನ್ನಿಟ್ಟುಕೊಂಡು ‘ಅದ್ದೂರಿ’ ಸಿನಿಮಾ ನಿರ್ದೇಶನ ಮಾಡಿದ್ದರು ಎ.ಪಿ. ಅರ್ಜುನ್. ಬಾಕ್ಸ್ ಆಫೀಸ್‌ನಲ್ಲಿ ಮ್ಯಾಜಿಕ್ ಮಾಡಿದ್ದ ಅರ್ಜುನ್ ಮತ್ತು ಧ್ರುವ ಜೋಡಿ ಮತ್ತೆ ಒಂದಾಗಿದೆ. ಉದಯ್ ಮೆಹ್ತಾ ನಿರ್ಮಾಣದಲ್ಲಿ ಭರ್ಜರಿ ಆ್ಯಕ್ಷನ್ ಸಿನಿಮಾವೊಂದನ್ನು ಅರ್ಜುನ್ ನಿರ್ದೇಶನ ಮಾಡುತ್ತಿದ್ದಾರೆ. ಧ್ರುವ ಸರ್ಜಾ ಅದಕ್ಕೆ ನಾಯಕ.

ಇದೇ ವರ್ಷ ತೆರೆಕಂಡ ‘ಪೊಗರು’ ಸಿನಿಮಾದ ನಂತರ ಧ್ರುವ ‘ದುಬಾರಿ’ ಎಂಬ ಸಿನಿಮಾದಲ್ಲಿ ನಟಿಸಬೇಕಿತ್ತು. ಆದರೆ ಕೊರೊನಾ ಕಾರಣಕ್ಕೆ ಆ ಸಿನಿಮಾ ಟೇಕಾಫ್ ಆಗಿಲ್ಲ. ಇತ್ತ ‘ಕಿಸ್’ ಸಿನಿಮಾ ನಂತರ ಎ.ಪಿ. ಅರ್ಜುನ್ ಕೂಡ ಒಂದು ದೊಡ್ಡ ಬಜೆಟ್‌ನ ಲವ್ ಸ್ಟೋರಿ ಮಾಡುವುದಾಗಿ ಹೇಳಿದ್ದರು. ಆ ಸಿನಿಮಾ ಕೂಡ ತಡವಾಗುತ್ತಿದೆ. ಹಾಗಾಗಿ ಈ ಇಬ್ಬರೂ ಸೇರಿ ಒಂದು ಸಿನಿಮಾ ಮಾಡಲು ಸಿದ್ಧರಾಗಿದ್ದಾರೆ.

‘ಪೊಗರು’ ಸಿನಿಮಾದ ಸಾಧಾರಣ ಗೆಲುವಿನ ನಂತರ ಧ್ರುವ ಅವರು ಹಿಟ್‌ಗಾಗಿ ಹಂಬಲಿಸುತ್ತಿದ್ದಾರೆ. ಎ.ಪಿ. ಅರ್ಜುನ್ ಅವರಿಗೂ ಹಿಟ್ ಅನ್ನುವುದು ತುದಿಬೆರಳಿಗೆ ತಾಕುವ ಬೆಣ್ಣೆಯ ಮಡಿಕೆಯಾಗಿದೆ. ಹಾಗಾಗಿ ಈ ಇಬ್ಬರೂ ಸೇರಿ ಹಳೆಯ ಮ್ಯಾಜಿಕ್ ಅನ್ನು ಮರುಕಳಿಸುವ ಉತ್ಸಾಹದಲ್ಲಿದ್ದಾರೆ.

ಈಗಾಗಲೇ ಚಿತ್ರದ ಮುಹೂರ್ತ ನೆರವೇರಿದ್ದು, ಚಿತ್ರೀಕರಣ ಸದ್ಯವೇ ಆರಂಭವಾಗಲಿದೆ. ನಾಯಕಿ ಮತ್ತು ಉಳಿದ ತಾರಾಗಣ, ತಾಂತ್ರಿಕ ತಂಡದ ಬಗ್ಗೆ ಚಿತ್ರತಂಡ ಯಾವುದೇ ಮಾಹಿತಿ ಇದುವರೆಗೂ ಜಾಹೀರುಪಡಿಸಿಲ್ಲ. ■